ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	578
ಸದಸ್ಯರ ಹೆಸರು	:	ಶ್ರೀ ರಘುನಾಥ್ ರಾವ್ ಮಲ್ಕಾಪೂರೆ
ಉತ್ತರಿಸುವ ದಿನಾಂಕ	:	10-03-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಪೌರಾಡಳಿತ ಇಲಾಖೆಯಲ್ಲಿ ಯೋಜನಾ ನಿರ್ದೇಶಕರು/ಪೌರಾಯುಕ್ತರು/ಮುಖ್ಯಾಧಿಕಾರಿಗಳು/ಕಂದಾಯಾಧಿಕಾರಿಗಳ ವೃಂದದಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳೆಷ್ಟು; ಎಷ್ಟು ಅವಧಿಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ; (ಹೆಸರುಗಳೊಂದಿಗೆ ಸಂಪೂರ್ಣ ವಿವರವಾದ ಮಾಹಿತಿ ನೀಡುವುದು)	ಪೌರಾಡಳಿತ ಇಲಾಖೆಯಲ್ಲಿ ನಿಯೋಜನೆ ಮೇರೆಗೆ ಯೋಜನಾ ನಿರ್ದೇಶಕರು/ ಪೌರಾಯುಕ್ತರು/ ಮುಖ್ಯಾಧಿಕಾರಿಗಳು/ ಕಂದಾಯಾಧಿಕಾರಿಗಳ ವೃಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆಗಳು ಕೆಳಕಂಡಂತಿವೆ ಯೋಜನಾ ನಿರ್ದೇಶಕರು-01 ಪೌರಾಯುಕ್ತರು-(ಯಾರು ಇಲ್ಲ) ಮುಖ್ಯಾಧಿಕಾರಿಗಳು-06 ಕಂದಾಯಾಧಿಕಾರಿಗಳು-02 **ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.**
ಆ.	4 ರಿಂದ 5 ವರ್ಷಗಳಿಗೂ ಮೀರಿ ನಿಯೋಜನೆ ಮೇಲೆ ಮುಂದುವರೆದ ಅಧಿಕಾರಿಗಳೆಷ್ಟು; ಕಾರಣಗಳೊಂದಿಗೆ ಜಿಲ್ಲಾವಾರು, ಹುದ್ದೆವಾರು ವಿವರ ನೀಡುವುದು;	ಶ್ರೀ ಎಸ್.ಎಫ್ ನಂದಗಿರಿ, ಇವರೊಬ್ಬರು ಮಾತ್ರ ಇಲಾಖೆಯಲ್ಲಿ ನಿಯೋಜನೆ ಮೇರೆಗೆ 5 ವರ್ಷಗಳಿಗೂ ಮೀರಿ ಮುಂದುವರೆದಿರುತ್ತಾರೆ. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕಲಬುರಗಿ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಇವರ ಸೇವೆಯನ್ನು ಸರ್ಕಾರದ ಆದೇಶ ಸಂಖ್ಯೆ ನಅಇ 25 ಟಿಎಂಇ 2019, ದಿನಾಂಕ 20-07-2019ರಲ್ಲಿ ಮಾತೃ ಇಲಾಖೆಗೆ ಹಿಂದಿರುಗಿಸಲಾಗಿತ್ತು. ಸದರಿ ಆದೇಶವನ್ನು ಮಾನ್ಯ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ನ್ಯಾಯಾಲಯವು ವರ್ಗಾವಣೆ ಆದೇಶವನ್ನು ರದ್ದುಗೊಳಿಸಿ ನೀಡಿರುವ ತೀರ್ಪಿನನ್ವಯ ಮುಂದುವರೆದಿರುತ್ತಾರೆ.
ಇ.	4 ರಿಂದ 5 ವರ್ಷಗಳಿಗೂ ಮೀರಿ ನಿಯೋಜನೆ ಮೇಲೆ ಮುಂದುವರೆಸಲು ನಿಯಮಗಳಲ್ಲಿ ಅವಕಾಶ ಇದೆಯೇ; ಇಲ್ಲದಿದ್ದಲ್ಲಿ, ಮುಂದುವರೆಸಲು ಕಾರಣಗಳೇನು? (ಮಾಹಿತಿ ನೀಡುವುದು)	ಕರ್ನಾಟಕ ನಾಗರಿಕ ಸೇವಾ ನಿಯಮಗಳು 1958ರ ನಿಯಮ 50(3)ರನ್ವಯ ನಿಯೋಜನೆಯ ಗರಿಷ್ಠ ಅವಧಿ 5 ವರ್ಷಗಳಾಗಿದ್ದು, ಸರ್ಕಾರದ ವಿಶೇಷ ಆದೇಶಗಳ ಮೇರೆಗೆ ಹೆಚ್ಚಿನ ಅವಧಿಗೆ ವಿಸ್ತರಿಸಬಹುದಾಗಿದೆ.

ಸಂಖ್ಯೆ: ನಅಇ 08 ಎಲ್‌ಸಿಕ್ಯೂ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು

ಅನುಬಂಧ				
ಕ್ರ. ಸಂ.	ಮಹಾನಗರಪಾಲಿಕೆ/ಡಿಯುಡಿಸಿ/ನಗರ ಸ್ಥಳೀಯ ಸಂಸ್ಥೆ ಹೆಸರು	ಅಧಿಕಾರಿ/ನೌಕರರ ಹೆಸರು	ಅನ್ಯ ಇಲಾಖೆಯಾಗಿದ್ದಲ್ಲಿ ಮಾತ್ರ ಇಲಾಖೆಯ ಹೆಸರು	ಯಾವ ದಿನಾಂಕದಿಂದ ಕಾರ್ಯನಿರ್ವಹಣೆ
1	ಜಿಲ್ಲಾ ನಗರಾಭಿವೃದ್ಧಿ ಕೋಶ, ಕಲಬುರಗಿ ಜಿಲ್ಲೆ	ಎಸ್.ಎಫ್.ನಂದಗಿರಿ (ಯೋಜನಾ ನಿರ್ದೇಶಕರು)	ಕೆ.ಎಸ್.ಎಫ್.ಸಿ.	06.06.2014
2	ಪುರಸಭೆ ಮಾಲೂರು	ಶ್ರೀ.ಎಸ್.ಪ್ರಸಾದ್ (ಮುಖ್ಯಾಧಿಕಾರಿ)	ಸಾಂಖ್ಯಿಕ ಇಲಾಖೆ	14.06.2019
3	ಪುರಸಭೆ, ಕುಣಿಗಲ್	ರಮೇಶ್ ಆರ್. (ಮುಖ್ಯಾಧಿಕಾರಿ)	Medical Education, Store keeper	17.09.2018
4	ಪಟ್ಟಣ ಪಂಚಾಯಿತಿ ವಿರಾಜಪೇಟೆ	ಶ್ರೀಧರ್ (ಮುಖ್ಯಾಧಿಕಾರಿ)	ಲೋಕೋಪಯೋಗಿ ಇಲಾಖೆ	18.06.2019
5	ಪುರಸಭೆ, ಕುಮಟಾ	ಶ್ರೀ ಸುರೇಶ ಎಂ. ಕೆ. (ಮುಖ್ಯಾಧಿಕಾರಿ)	ಉದ್ಯೋಗ ಮತ್ತು ತರಬೇತಿ ಇಲಾಖೆ	22.08.2016
6	ಪುರಸಭೆ, ಹರಪನಹಳ್ಳಿ	ಶ್ರೀ ನಾಗರಾಜ ನಾಯ್ಕ್.ಬಿ.ಆರ್ (ಮುಖ್ಯಾಧಿಕಾರಿ)	ಅರ್ಥಿಕ ಮತ್ತು ಸಾಂಖ್ಯಿಕ ಇಲಾಖೆ	26.10.2018
7	ಶಿವಮೊಗ್ಗ ಮಹಾನಗರಪಾಲಿಕೆ	ಶ್ರೀಮತಿ ಸುನಿತಾ (ಕಂದಾಯಾಧಿಕಾರಿ)	ಆರ್ಥಿಕ ಇಲಾಖೆ (ಸಚಿವಾಲಯ)	14.02.2018
8	ಶಿವಮೊಗ್ಗ ಮಹಾನಗರಪಾಲಿಕೆ	ಶ್ರೀ ಷಡಾಕ್ಷರಿ (ಕಂದಾಯಾಧಿಕಾರಿ)	ಕಂದಾಯ ಇಲಾಖೆ	21.06.2019
9	ಕಡೂರು ಪುರಸಭೆ	ಹೆಚ್.ಎನ್. ಮಂಜುನಾಥ, (ಮುಖ್ಯಾಧಿಕಾರಿ)	ಕೆ.ಎಸ್.ಎಫ್.ಸಿ	15.09.2019